(ಸರ್ವೋಚ್ಚ ನ್ಯಾಯಾಲಯ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎಸ್.ಪಿ. ರಾಧಾಕೃಷ್ಣನ್ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ದೀಪಕ್ ಮಿಶ್ರಾ

ಮೋತಿಲಾಲ ಸೊಂಗರಾ ವಿರುದ್ಧ ಪ್ರೇಮ ಪ್ರಕಾಶ @ ಪಪ್ಪು ಮತ್ತು ಇನ್ನೊಬ್ಬರು*

ಕ್ರಿ.ಅ.ಸಂಖ್ಯೆ: 785/2013,ದಿನಾಂಕ: 16 ನೇ ಮೇ, 2013 ಕರ್ನಾಟಕ ತೀರ್ಪುಗಳ ವರದಿ 2015

ಆಜ್ಞೆ

ನ್ಯಾಯಮೂರ್ತಿ ಶ್ರೀ ದೀಪಕ್ ಮಿಶ್ರಾ:

ಪ್ರಸ್ತುತ ಮೊಕದ್ದಮೆಯ ವಾಸ್ತವ ಸಂಗತಿಯ ಮೊತ್ತವು ಒಂದು ದೃಶ್ಯವನ್ನು ಅಲಂಕರಿಸಿದ್ದು, ನ್ಯಾಯಾಲಯವು ಮಕ್ಕಳು ಆಟವಾಡಲು ಬರುವ ಪ್ರಯೋಗಶಾಲೆಯಲ್ಲ " ಎಂಬ ಹೇಳಿಕೆಯನ್ನು ಸಮರ್ಥನೀಯವಾಗಿ ಅನ್ವಯಿಸಬಹುದಾದ ಮೊದಲ ಎದುರುದಾರನ ಮನಸ್ಥಿತಿಯನ್ನು ಅದು ಬಿಂಬಿಸುತ್ತದೆ.ಎದುರುದಾರ ಆಪಾದಿತನ ಕ್ರಿಯೆಯು, ಒಬ್ಬನು ತಾನು ನ್ಯಾಯಾಲಯದಲ್ಲಿ ಅ ಚದುರಂಗದ ಆಟವಾಡುವುದಕ್ಕೆ ಅರ್ಹನಾಗಿದ್ದೇನೆಂಬ ಪರಿಕಲ್ಪನೆಯನ್ನು ಪ್ರಜ್ಞಾಪೂರ್ವಕವಾಗಿ ಕಲ್ಪಿಸಿಕೊಳ್ಳುವ ವರ್ತನೆಯನ್ನು ಅಭಿವ್ಯಕ್ತಿಸುತ್ತದೆ ಮತ್ತು ಅದು ಔಚಿತ್ಯವನ್ನು ಎಂದರೆ, ವ್ಯಾಜ್ಯಕಾರನಿಂದ ನಿರೀಕ್ಷಿಸಿದ ಮಾನದಂಡವನ್ನು ಹಾಗೂ ವಾಸ್ತವ ಸಂಗತಿಗಳನ್ನು ಮರೆಮಾಚುವ ಅಂಶಗಳ ಬಗ್ಗೆ ನ್ಯಾಯಾಲಯಗಳ ತಿರಸ್ಕಾರವನ್ನು ನಿರಾತಂಕವಾಗಿ ದೂರವಿರಿಸಬಹುದಾಗಿದೆ.ಅವನು ತನ್ನ ಸ್ವಂತ ಪ್ರಯೋಜನಕ್ಕೆ ತಂತ್ರಗಾರಿಕೆಗಳ ನೆರವಿನಿಂದ ಆಟವಾಡಬಹುದಾಗಿದೆಯೆಂಬುದನ್ನು ಆಧರಿಸಿ ಆ ಒಂದು ಪ್ರವೃತ್ತಿಯು, ಅವನ ಮನಸ್ಸಿನಲ್ಲಿ ಹೆಚ್ಚು ತೂಕವಾಗಿರುವಂತೆ ಕಂಡುಬರುತ್ತಿದ್ದು, ಕಾನೂನನ್ನು, ಅದರ ಅಗತ್ಯ ತಾತ್ಪರ್ಯದೊಂದಿಗೆ ಮತ್ತು ನ್ಯಾಯವನ್ನು, ಅದರ ದೈವಿಕ ಲಕ್ಷಣದೊಂದಿಗೆ, ಮರ್ಯಾದೆಗೆಟ್ಟು ಗೋರಿಯಲ್ಲಿ ಸಮಾಧಿಮಾಡಬಹುದಾಗಿದೆ.ಆದರೆ, ಅದನ್ನು ಬಹಿರಂಗಪಡಿಸುವವನಾದ ಫಿರ್ಯಾದುದಾರನು ತನ್ನ ಬದ್ಧತೆಯುಳ್ಳ ಮತ್ತು ಚಮತ್ಕಾರಯುತ ಪ್ರಯತ್ನದಿಂದ, ಯಾವ ಮೊಕದ್ದಮೆಯಲ್ಲಿ ಗುಣಾರ್ಹತೆಗಳ ಆಧಾರವಿಲ್ಲದೆ, ಕೇವಲ ಕ್ರಿಮಿನಲ್ ಪುನರ್ಪರಿಶೀಲನಾ ಸಂ .2009 ರ 7 ರಲ್ಲಿ ಜೋಧಪುರದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಸಂ .1 ಇವರು, ಹೆಚ್ಚುವರಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್‌ರವರು ಸಂಜ್ಞೆಯತೆಯನ್ನು ತೆಗೆದುಕೊಂಡು, ಸಮನುಗಳನ್ನು ನೀಡಿ ಹೊರಡಿಸಿದದಿನಾಂಕ: 19-11-2008ರ ಆದೇಶವನ್ನು ಈಗಾಗಲೇ ರದ್ದುಪಡಿಸಿದ್ದಾರೆಂಬ ಬುನಾದಿಯ ಮೇಲೆ ಮಾನ್ಯ ಏಕಸದಸ್ಯ ಪೀಠವುದಿನಾಂಕ: 13-8-2012 ರ ಆದೇಶದ ಮೂಲಕ ಎದುರುದಾರ ಆಪಾದಿತನ ವಾದವನ್ನು ಪುರಸ್ಕರಿಸಿ, ದಂಡ ಸಂಹಿತೆ, 1860 (ಸಂಕ್ಷಿಪ್ತವಾಗಿ ' ಐಪಿಸಿ) ರ 323, 324 ಮತ್ತು 307 ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಅವನ ವಿರುದ್ಧ ರೂಪಿಸಿದ ಆರೋಪಗಳನ್ನು ರದ್ದುಪಡಿಸಿದೆಯೋ ಆ ಪ್ರೇಮ್ಪ್ರಕಾಶ್ -ವಿರುದ್ಧ- ರಾಜಸ್ತಾನ ರಾಜ್ಯ, ಮೊಕದ್ದಮೆಯಲ್ಲಿ ಜೋಧಪುರದಲ್ಲಿನ ರಾಜಸ್ತಾನದ ನ್ಯಾಯಿಕ ವ್ಯಾಪ್ತಿಯುಳ್ಳ ಉಚ್ಚ ನ್ಯಾಯಾಲಯವು ಹೊರಡಿಸಿದ ಆದೇಶವನ್ನು ಚ ತೀವ್ರವಾಗಿ ಪ್ರಶ್ನಿಸುವ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಬಳಸುವ ಮೂಲಕ ಫೀನಿಕ್ಸ್ನಂತೆ ಗೋರಿಯಿಂದ ಎದ್ದು ಬರುವಂತೆ ಮಾಡಲು ಅವಕಾಶ ಕಲ್ಪಿಸುತ್ತಾನೆ.ಇದರಿಂದಾಗಿ ' ತಳಹದಿಯೇ ಕುಸಿದಾಗ, ಅದರ ಮೇಲು ರಚನೆಯು ಕುಸಿಯುವುದಕ್ಕೆ

ಬದ್ಧವಾಗಿರುತ್ತದೆ ' ಎಂಬ ಮೂಲತತ್ವವು ಇಲ್ಲಿಗೆ ಅನ್ವಯವಾಗುತ್ತದೆ.ದಿನಾಂಕ: 27.7.2009 ರಂದು ಜೋಧಪುರದ ಮಾನ್ಯ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಸಂ .3 ಇವರ ನ್ಯಾಯಾಲಯವು, ಸೆಷನ್ಸ್ ಮೊಕದ್ದಮೆ ಸಂ .2009 ರ 9 ರಲ್ಲಿ ಆರೋಪಗಳನ್ನು ರೂಪಿಸಿತ್ತು ಎಂಬುದು ಆಪಾದಿತನಿಗೆ ಸಂಪೂರ್ಣವಾಗಿ ತಿಳಿದಿತ್ತು ಎಂಬ ವಾಸ್ತವ ಸಂಗತಿಗಳ ಹೇಳಿಕೆಯನ್ನು ಮತ್ತು ಹಲವು ದಿನಾಂಕಗಳನ್ನು ಉಚ್ಚ ನ್ಯಾಯಾಲಯವು ಗಮನಿಸಿದರೂ, ಕಾನೂನಾತ್ಮಕವಾಗಿ ಅಸಹಾಯಕತೆಯ ಭಾವನೆಯಿಂದ ಪುನರ್ಪರಿಶೀಲನಾ ನ್ಯಾಯಾಲಯಕ್ಕೆ ಎಂದರೆ, ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಸಂ .1 ಜೋಧಪುರ ಈ ನ್ಯಾಯಾಲಯಕ್ಕೆ ತಿಳಿಸದೆ, ಆರೋಪಗಳನ್ನು ರೂಪಿಸಿದ ಆದೇಶದಲ್ಲಿ ಮಧ್ಯ ಪ್ರವೇಶಿಸಿ, ಸೂಕ್ತ ಹಂತದಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ (ಸಂಕ್ಷಿಪ್ತವಾಗಿ ' ಸಂಹಿತೆ ') 319 ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸುವುದಕ್ಕೆ ಪ್ರಾಸಿಕ್ಯೂಷನ್ಗೆ ಸ್ವಾತಂತ್ರ್ಯ ನೀಡಿ, ಅದನ್ನು ವಜಾಗೊಳಿಸಿತು.

2. ಈಗ ಪ್ರಾರಂಭಿಕ ವಾಸ್ತವ ಸಂಗತಿಗಳತ್ತ ಗಮನಹರಿಸಬಹುದು.ಮಾಹಿತಿದಾರನಾದ ಮೇಲ್ಮನವಿದಾರನು ತನಿಖೆಯನ್ನು ನಡೆಸಿದ ಆಧಾರದ ಮೇಲೆ ಪ್ರತಾಪ್ನಗರ ಪೊಲೀಸ್ ಠಾಣೆಯಲ್ಲಿ 23-11-2007 ರಂದು ಪ್ರಥಮ ಮಾಹಿತಿ ವರದಿ ಸಂ .428 ಅನ್ನು ದಾಖಲಿಸುತ್ತಾನೆ, ಅಂತಿಮವಾಗಿ, ಶ್ಯಾಮಲಾಲ್ ಬಿನ್ ವೆನಾರಾಮ್ ಎಂಬುವವನ ವಿರುದ್ಧ ಐಪಿಸಿ 341, 323, 324, 307 ಮತ್ತು 379 ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ ಆರೋಪ ಪಟ್ಟಿಯನ್ನು ಸಲ್ಲಿಸಲಾಗುತ್ತದೆ.ಆರೋಪಪಟ್ಟಿಯನ್ನು ಸಲ್ಲಿಸಿದ ನಂತರ, ತನ್ನ ಮಗನ ಮೇಲೆ ಚಾಕುವಿನಿಂದ ದಾಳಿ ಮಾಡಿದ್ದ ಪ್ರೇಮ್ ಪ್ರಕಾಶ್ ಎಂಬ ಮತ್ತೊಬ್ಬ ಆಪಾದಿತನನ್ನು ಉದ್ದೇಶಪೂರ್ವಕವಾಗಿ ಆಪಾದಿತನನ್ನಾಗಿ ಮಾಡಿಲ್ಲವೆಂದು ಪ್ರಮಾಣಪೂರ್ವಕವಾಗಿ ತಿಳಿಸಿ ಮಾನ್ಯ ಹೆಚ್ಚುವರಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್ ಸಂ .2 ಇವರ ಮುಂದೆ ಮಾಹಿತಿದಾರನು ಅರ್ಜಿಯನ್ನು ದಾಖಲಿಸಿದನು.ಮಾನ್ಯ ಮ್ಯಾಜಿಸ್ಟ್ರೇಟರು ದಾಖಲೆಯಲ್ಲಿರುವ ಸಾಕ್ಷ್ಯಗಳನ್ನು ವಿಶ್ಲೇಷಿಸಿದ ನಂತರ, ಈಗಾಗಲೇ ಸ್ಪಷ್ಟವಾಗಿರುವಂತೆ ಐಪಿಸಿ 323, 324, 307 ಮತ್ತು 379 ನೇ ಪ್ರಕರಣಗಳ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗಾಗಿ ಪ್ರೇಮ್ ಪ್ರಕಾಶ್ ಅಲಿಯಾಸ್ ಪಪ್ಪು ವಿರುದ್ಧ ಸಂಜ್ಞೆಯತೆಯನ್ನು ತೆಗೆದುಕೊಳ್ಳುವುದು ಸೂಕ್ತವೆಂದು ಭಾವಿಸಿ, ತದನುಸಾರವಾಗಿ ದಸ್ತಗಿರಿ ವಾರಂಟಿನ ಮುಖಾಂತರ ಅವನಿಗೆ ಸಮನು ಮಾಡಿದರು.

3. ಅಸಮಾಧಾನಗೊಂಡ ಆಪಾದಿತ ಪ್ರೇಮ್ ಪ್ರಕಾಶ್ ಸದರಿ ಆದೇಶದ ಕಾನೂನು ಸಮರ್ಥನೀಯತೆಯನ್ನು ಕ್ರಿಮಿನಲ್ ಪುನರ್ಪರಿಶೀಲನಾ ಅರ್ಜಿ ಸಂ .2007 ರ 7 ರಲ್ಲಿ ಪ್ರಶ್ನಿಸಿದ್ದು, ಅದು ಜೋಧಪುರದ ಮಾನ್ಯ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಸಂ .1 ಇವರ ನ್ಯಾಯಾಲಯದ ಮುಂದೆ ವ್ಯವಹರಣೆಗೆ ಬರಲಾಗಿ, ಆ ನ್ಯಾಯಾಲಯವು ' ಕಲಾಮುದ್ದೀನ್ -ವಿರುದ್ಧ-ರಾಜಸ್ಥಾನ ರಾಜ್ಯ, (2005) 2 ಕ್ರಿ.ಎಲ್.ಆರ್. 1118 (ರಾಜ್) ಮತ್ತು ನತ್ತಿಸಿಂಗ್ -ವಿರುದ್ಧ ರಾಜಸ್ಥಾನ ರಾಜ್ಯ2007 ಕ್ರಿಎಲ್ಜೆ 254:(2007) 1 ಕ್ರಿಎಲ್ಜೆ 621 (ರಾಜ್) ಮೊಕದ್ದಮೆಗಳ ತೀರ್ಪುಗಳನ್ನು ಉಲ್ಲೇಖಿಸಿ, ಅಪರಾಧಗಳನ್ನು ಸೆಷನ್ಸ್ ನ್ಯಾಯಾಲಯವು ಅಧಿವಿಚಾರಣೆ ಮಾಡಬಹುದಾಗಿರುವಾಗ, ಆಕ್ಷೇಪಣಾ ಅರ್ಜಿಯನ್ನು ಆಧರಿಸಿ ಮ್ಯಾಜಿಸ್ಟ್ರೇಟ್ ಸಂಜ್ಞೆಯತೆಯನ್ನು ತೆಗೆದುಕೊಳ್ಳಲಾಗದು ಎಂದು ಅಭಿಪ್ರಾಯಪಟ್ಟಿತು ಮತ್ತು ತದನುಸಾರವಾಗಿ,ದಿನಾಂಕ: 14-10-2009ರ ಆದೇಶದ ಮೂಲಕ ಅದನ್ನು ರದ್ದುಪಡಿಸಿತು.ಆ ದಿನದಂದು ಗಮನಕ್ಕೆ ಬಂದಂತೆ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಹಾಜರಿದ್ದರು, ಆದರೆ, ದುರದೃಷ್ಟವಶಾತ್ ಪುನರ್ ಪರಿಶೀಲನಾ ಅರ್ಜಿಯಲ್ಲಿ ಎದುರು ಪಕ್ಷಕಾರ 2 ಆಗಿ ಸಾಕ್ಷ್ಯವನ್ನು ಮಂಡಿಸಿದ್ದ ಮಾಹಿತಿದಾರನೇ ಹಾಜರಿರಲಿಲ್ಲ.

4. ಗಮನಕ್ಕೆ ಬಂದಂತೆ, ಗೊಂದಲಮಯವಾದ ಲಕ್ಷಣವೇನೆಂದರೆ, ಮಾನ್ಯ ಹೆಚ್ಚುವರಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್ ತೆಗೆದುಕೊಂಡ ಸಂಜ್ಞೆಯತೆಯ ಆಧಾರದ ಮೇಲೆ ಇಬ್ಬರು ಆಪಾದಿತ ವ್ಯಕ್ತಿಗಳನ್ನು ಎಂದರೆ ಶ್ಯಾಮ್ಲಾಲ್ ಮತ್ತು ಪ್ರೇಮ್ ಪ್ರಕಾಶ್ ಎಂಬುವವರನ್ನು ಅಧಿವಿಚಾರಣೆಗೆ ಒಪ್ಪಿಸಲಾಯಿತು ಮತ್ತು ವಿಷಯದ ವ್ಯವಹರಣೆಯನ್ನು ಜೋಧಪುರದ ಮಾನ್ಯ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಸಂ .3 ಇವರು ನಡೆಸಿದ್ದು, ಇವರುದಿನಾಂಕ: 27.7.2009 0 ರಂದು ಪಕ್ಷಕಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್ ವಾದವನ್ನು ಆಲಿಸಿದರು ಮತ್ತು ಎಫ್ಐಆರ್ ನಲ್ಲಿರುವ ಆಪಾದನೆಗಳ ಬಗ್ಗೆ ಗಮನಹರಿಸಿ, ಪ್ರಶ್ನಿತ ಅಪರಾಧದಲ್ಲಿ ಆಪಾದಿತ ವ್ಯಕ್ತಿಗಳ ೧ ಭಾಗವಹಿಸುವಿಕೆಯನ್ನು ಪರಿಗಣಿಸಿ, ಗಾಯಗಳ ಸ್ವರೂಪವನ್ನು ಗಣನೆಗೆ ತೆಗೆದುಕೊಂಡು, ಐಪಿಸಿ 307 ನೇ ಪ್ರಕರಣದ ಅಡಿಯಲ್ಲಿನ ಅಪರಾಧದ ಒಳಸುಳಿಗಳ ಬಗ್ಗೆ ಲಕ್ಷ್ಯವಹಿಸಿ, ಮೇಲ್ನೋಟಕ್ಕೆ ಕಂಡುಬರುವ ಸಾಕ್ಷಿದಾರರ ವಿಶ್ವಾಸಾರ್ಹತೆಯನ್ನು ೧ ಗಣನೆ ಮಾಡಿ ಮತ್ತು ಇತರ ಹಲವು ಸಂಗತಿಗಳ ಬಗ್ಗೆ ವಿವೇಚಿಸಿದ ನಂತರ ಈ ಕೆಳಕಂಡಂತೆ ಅಭಿಪ್ರಾಯಪಟ್ಟರು:

66 ಮೇಲೆ ತಿಳಿಸಿದ ತೀರ್ಪುಗಳಲ್ಲಿ ಪ್ರತಿಪಾದಿಸಿದ ಮೂಲತತ್ವದ ಪರಿಕಲ್ಪನೆಯಲ್ಲಿ ಮೊಕದ್ದಮೆಯ ಸಂಗತಿಗಳು ಹಾಗೂ ಸಂದರ್ಭಗಳನ್ನು ಅವಲೋಕಿಸಿದಾಗ, ಮೇಲ್ನೋಟಕ್ಕೇ ಹಳೆಯ ವೈಷಮ್ಯದ ಕಾರಣದಿಂದಾಗಿ ಆಪಾದಿತ ವ್ಯಕ್ತಿಗಳು ಬಲಿಪಶುವಾದ ವ್ಯಕ್ತಿಯ ದೇಹದ ಮೇಲೆ ಹರಿತವಾದ ಆಯುಧದಿಂದ ಹಲವಾರು ಗಾಯಗಳನ್ನುಂಟು ಮಾಡಿದ್ದಾರೆಂಬುದು ಕಂಡುಬರುತ್ತದೆ ಮತ್ತು ಇದರಿಂದ ಗಾಯಾಳು ದಿನೇಶ್ಕುಮಾರ್ನ ಹತ್ಯೆ ಮಾಡುವ ಪ್ರಯತ್ನವು ಆಪಾದಿತ ವ್ಯಕ್ತಿಗಳ ಸಮಾನ ಉದ್ದೇಶವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.ಈ ಹಂತದಲ್ಲಿ ಸಾಕ್ಷ್ಯವನ್ನು ಸೂಕ್ಷ್ಮವಾಗಿ ಮತ್ತು ಸಂಕೀರ್ಣವಾಗಿ ವಿವೇಚಿಸುವುದು ಯುಕ್ತವಲ್ಲ.ಮೇಲೆ ಹೇಳಿದ ತೀರ್ಪುಗಳಿಂದ ಪಡೆದ ಮಾರ್ಗದರ್ಶನದಿಂದ, ಈ ಹಂತದಲ್ಲಿ ಆಪಾದಿತ ವ್ಯಕ್ತಿಗಳು ಎಸಗಿದ ಕೃತ್ಯಗಳ ಪರಿಣಾಮವನ್ನು ಮತ್ತು ಆಪಾದಿತ ವ್ಯಕ್ತಿಗಳ ಸಮಾನ ಉದ್ದೇಶವನ್ನು ಹೋಲಿಕೆ ಮಾಡುವುದು ಅತ್ಯಂತ ಮುಖ್ಯವೆಂಬುದು ಸ್ಪಷ್ಟವಾಗಿದೆ.ಗಾಯಾಳುವಿನ ಯಾವುದೇ ಸೂಕ್ಷ ಎ್ರ ಅಂಗಾಂಗಗಳ ಮೇಲೆ ಯಾವುದೇ ತೀವ್ರವಾದ ಗಾಯಗಳನ್ನುಂಟು ಮಾಡಿಲ್ಲ ಎಂಬ ಕಾರಣ ಮಾತ್ರದಿಂದಲೇ ದಂಡ ಸಂಹಿತೆಯ 307 ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧದಿಂದ ಆಪಾದಿತ ವ್ಯಕ್ತಿಗಳನ್ನು ಮುಕ್ತಗೊಳಿಸುವುದು ಈ ಹಂತದಲ್ಲಿ ಸಮರ್ಥನೀಯವೂ ಅಲ್ಲ ಹಾಗೂ ಕಾನೂನು ಸಮ್ಮತತೆಯೂ ಅಲ್ಲ ".

ಆದರೆ, ಐಪಿಸಿ 379 ನೇ ಪ್ರಕರಣದ ಅಡಿಯಲ್ಲಿನ ಅಪರಾಧಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಸದರಿ ಆರೋಪದಿಂದ ಅವರನ್ನು ಮುಕ್ತಗೊಳಿಸಿದರು.ಅಂತಿಮವಾಗಿ, ಐಪಿಸಿ 307/304 ನೇ ಪ್ರಕರಣಗಳಿಗೆ ಪರ್ಯಾಯವಾಗಿ 341, 323/34, 324/34, 307 ನೇ ಪ್ರಕರಣಗಳ ಅಡಿಯಲ್ಲಿನ ಅಪರಾಧಗಳಿಗಾಗಿ ಆರೋಪಗಳನ್ನು ರೂಪಿಸಿದರು.

5. ಆರೋಪವನ್ನು ರೂಪಿಸುವ ಸಮಯದಲ್ಲಿ ವಿಷಯದ ಬಗ್ಗೆ ಸುದೀರ್ಘವಾಗಿ ವಿಚಾರಣೆ ನಡೆಸಲಾಗಿದೆ ಮತ್ತು ಮುಕ್ತಗೊಳಿಸುವ ಕೋರಿಕೆಯ ಬಗ್ಗೆ ವಾದ ಪ್ರತಿವಾದಗಳನ್ನು ಪರಿಗಣಿಸಲಾಗಿದೆ ಎಂಬ ಬಗ್ಗೆ ತೋರಿಸಲು ಸದರಿ ಆದೇಶವನ್ನು ನಾವು ವಿವರವಾಗಿ ಉಲ್ಲೇಖಿಸಿದೆವು.ಆದರೆ ಪ್ರಾಸಿಕ್ಯೂಷನ್ಗೆ ಮತ್ತು ಎದುರುದಾರ ಆಪಾದಿತನಿಗೆ ಚೆನ್ನಾಗಿಯೇ ತಿಳಿದಿರುವ ಕಾರಣಗಳಿಗಾಗಿ, ಸಮನುಗಳನ್ನು ನೀಡುವ ಆದೇಶವು ಸಮರ್ಥನೀಯವಾಗಿಲ್ಲವೆಂದು ಅಭಿಪ್ರಾಯಪಟ್ಟು ಪುನರ್ಪರಿಶೀಲನಾ ಅರ್ಜಿಯನ್ನು ಪುರಸ್ಕರಿಸಿದ ಜೋಧಪುರದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಸಂ .1 ಇವರ ಗಮನಕ್ಕೆ ಅದನ್ನು ತಂದಿರಲಿಲ್ಲ.ಸೆಷನ್ಸ್ ಮೊಕದ್ದಮೆ ಸಂ .2009 ರ 9

ಅನ್ನು ವ್ಯವಹರಿಸಿದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಸಂ .3 ಇವರು, ಸಂಜ್ಞೇಯತೆಯನ್ನು ತೆಗೆದುಕೊಂಡ ಆದೇಶವು ಪ್ರಶ್ನಿತವಾಗಿರುವಾಗ, ಆ ಆದೇಶದ ಸಮರ್ಥನೀಯತೆಯ ಬಗ್ಗೆ ಯಾಕೆ ವಿಚಾರಣೆ ಮಾಡಲಿಲ್ಲ ಎಂಬುದೇ ನಿಜವಾಗಿಯೂ ಅರ್ಥವಾಗದ ಸಂದಿಗ್ದವಾದ ಸಮಸ್ಯೆಯಾಗಿದೆ.

6. ಪುನರ್ ಪರಿಶೀಲನೆಯಲ್ಲಿ ಸಂಜ್ಞೆಯತೆಯನ್ನು ತೆಗೆದುಕೊಂಡ ಆದೇಶವನ್ನು ರದ್ದುಪಡಿಸಿದ ನಂತರ, 11-1-2010 ರಂದು ಮುಕ್ತಗೊಳಿಸುವಂತೆ ಕೋರಿ ಅರ್ಜಿಯನ್ನು ಸಲ್ಲಿಸಲಾಯಿತು.ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ವಾಸ್ತವ ಸಂಗತಿಗಳ ಸಂಪೂರ್ಣ ಪೂರ್ವಾಪರಗಳನ್ನು ನಿರೂಪಿಸಿ, ಆರೋಪಗಳನ್ನು ರೂಪಿಸಿದ ಸಂಗತಿಯನ್ನು ಮಾನ್ಯ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಸಂ .1 ಇವರ ಗಮನಕ್ಕೆ ತಂದಿರಲಿಲ್ಲವೆಂದು ನಿರ್ಣಯಿಸಿದರು.ಮುಂದೆ ಉಚ್ಚ ನ್ಯಾಯಾಲಯವು, ಆರೋಪಗಳನ್ನು ರೂಪಿಸಿದ ಆದೇಶದ ವಿರುದ್ಧ ಸಲ್ಲಿಸಲಾಗಿದ್ದ ಕ್ರಿಮಿನಲ್ ಪುನರ್ ಪರಿಶೀಲನಾ ಅರ್ಜಿ ಸಂ .2009 ರ 1046 ರಲ್ಲಿ, ಅದನ್ನು ರದ್ದುಪಡಿಸುವುದಾಗಲಿ ಅಥವಾ ಮಾರ್ಪಾಟು ಮಾಡುವುದಾಗಲಿ ಮಾಡಲಿಲ್ಲ ಮತ್ತು ತದನುಸಾರವಾಗಿ, ಎದುರುದಾರ-ಆಪಾದಿತನನ್ನು ಮುಕ್ತಗೊಳಿಸುವುದು ಸೂಕ್ತವೆಂದು ಆಲೋಚಿಸಿಲ್ಲ.

7. ತನ್ನ ನಡತೆಯಿಂದ ವಾಸ್ತವ ಸಂಗತಿಯ ಸರಣಿಯನ್ನು ಅನಾವರಣಗೊಳ್ಳದಂತೆ, ವಿಚಲಿತಗೊಳ್ಳದಂತೆ ಮಾಡಿದ್ದರಿಂದಾಗಿ ಎದುರುದಾರ ಪ್ರೇಮ್ ಪ್ರಕಾಶ್ ಉಚ್ಚ ನ್ಯಾಯಾಲಯದ ಮುಂದೆ ಕ್ರಿಮಿನಲ್ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿದನು.ಉಚ್ಚ ನ್ಯಾಯಾಲಯದ ಮಾನ್ಯ ಏಕಸದಸ್ಯಪೀಠವು, ಸಂಗತಿಗಳನ್ನು ವಿವರವಾಗಿ ಚ ಕಾಲಾನುಕ್ರಮಗೊಳಿಸಿದ ನಂತರ, ಪುನರ್ ಪರಿಶೀಲನಾ ನ್ಯಾಯಾಲಯವು ಸಂಜ್ಞೇಯತೆಯನ್ನು ತೆಗೆದುಕೊಂಡ ಆದೇಶವನ್ನು ರದ್ದುಪಡಿಸಿ ಹೊರಡಿಸಿದದಿನಾಂಕ: 14-10-2009ರ ಆದೇಶವು ಪ್ರಶ್ನಿತವಾಗದಿರುವಾಗ, ವ್ಯವಹರಣೆಯ ಮುಂದುವರಿಕೆಯ ಮೂಲಾಧಾರವೇ ನಾಶವಾಗುತ್ತದೆ, ಆದ್ದರಿಂದ ಆರೋಪಗಳನ್ನು ರೂಪಿಸುವ ಆದೇಶವು ಸಮರ್ಥಿತವಾಗಲಾರದು ಎಂಬ ಅಭಿಪ್ರಾಯಕ್ಕೆ ಬಂದಿತು.ಆದರೆ, ಮೊದಲೇ ತಿಳಿಸಿದಂತೆ, ಸೂಕ್ತ ಹಂತದಲ್ಲಿ ಹೆಚ್ಚುವರಿ ಆಪಾದಿತನನ್ನು ಸಮನು ಮಾಡುವುದಕ್ಕಾಗಿ ಸಂಹಿತೆಯ 319 ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸುವಂತೆ ಏಕಸದಸ್ಯ ಪೀಠವು ಪ್ರಾಸಿಕ್ಯೂಷನ್ಗೆ ಸ್ವಾತಂತ್ರ್ಯ ನೀಡಿತು.ಗಮನಿಸಿದಂತೆ, ಉಚ್ಚ ನ್ಯಾಯಾಲಯವೂ ಕೂಡ ಪುನರ್ಪರಿಶೀಲನಾ ನ್ಯಾಯಾಲಯದಲ್ಲಿ ಸಂಜ್ಞೇಯತೆಯನ್ನು ತೆಗೆದುಕೊಂಡ ಆದೇಶವನ್ನು ರದ್ದು ಪಡಿಸಿ ಹೊರಡಿಸಿದ ಆದೇಶವು ಕಾನೂನಾತ್ಮಕವಾಗಿ ಸಮರ್ಥನೀಯವಲ್ಲವೆಂದೇ ಅಭಿಪ್ರಾಯಪಟ್ಟಿದೆ.

8. ಮೇಲ್ಮನವಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀಮತಿ ಮಧುರಿಮಾ ಟಾಟಿಯಾ ಅವರು, ಆಪಾದಿತನು ಶುದ್ಧ ಹಸ್ತದಿಂದ ನ್ಯಾಯಾಲಯದ ಮೊರೆ ಹೋಗಿಲ್ಲದಿರುವಾಗ ಮತ್ತು ಸ್ವತ:ಉಚ್ಚ ನ್ಯಾಯಾಲಯವೇ ಸಂಜ್ಞೇಯತೆಯ ಆದೇಶವನ್ನು ರದ್ದುಪಡಿಸಿದ ಆದೇಶವು ಸಮರ್ಥನೀಯವಲ್ಲವೆಂದು ಅಭಿಪ್ರಾಯಪಟ್ಟಿರುವಾಗ, ಆಪಾದಿತನನ್ನು ಮುಕ್ತಗೊಳಿಸಲು ನಿರಾಕರಿಸಿದ ಮಾನ್ಯ ಅಧಿ ವಿಚಾರಣಾ ನ್ಯಾಯಾಲಯವು ಹೊರಡಿಸಿದ ಆದೇಶದಲ್ಲಿ ಅದು ಮಧ್ಯಪ್ರವೇಶಿಸಬಾರದು ಎಂದು ವಾದ ಮಂಡಿಸಿದರು.

9. ವ್ಯತಿರಿಕ್ತವಾಗಿ, ಎದುರುದಾರ -1 ಪರ ಹಾಜರಾದ ಮಾನ್ಯ ನ್ಯಾಯವಾದಿ ಶ್ರೀ ರಿಷ್ಟ ಸಂಚೇತಿ ಅವರು, ಸಂಜ್ಞೇಯತೆಯನ್ನು ತೆಗೆದುಕೊಂಡಿರುವ ಆದೇಶವು ಪ್ರಶ್ನಿತವಾಗದೆ ಉಳಿದಿರುವವಷ್ಟರ ಮಟ್ಟಿಗೆ ಪುನರ್ ಪರಿಶೀಲನಾ ಅರ್ಜಿಯಲ್ಲಿ ಉಚ್ಚ ನ್ಯಾಯಾಲಯವು ಹೊರಡಿಸಿದ ಆದೇಶವು ಸಂಪೂರ್ಣವಾಗಿ

ದೋಷರಹಿತವಾದುದಾಗಿದ್ದು, ಮುಕ್ತಗೊಳಿಸುವಂತೆ ನಿರ್ದೇಶಿಸುವುದು ಉಚ್ಚ ನ್ಯಾಯಾಲಯದ ಕಡೆಯ ಬಾಧ್ಯತೆಯಾಗಿದೆಯೆಂದು ವಾದಿಸಿದರು.

10. ಸರ್ಕಾರದ ಪರ ಮಾನ್ಯ ವಕೀಲರಾದ ಶ್ರೀ ಇಂತಿಯಾಜ್ ಅಹಮದ್ ಅವರು, ಆ ಆದೇಶವನ್ನು ಸರ್ಕಾರವು ಪ್ರಶ್ನಿಸದಿದ್ದರೂ, ಈ ಮೊಕದ್ದಮೆಯೂ ಸಹ ಎದುರುದಾರ-ಆಪಾದಿತನನ್ನು ಮುಕ್ತಗೊಳಿಸಬಾರದು ಎಂಬುದೇ ಆಗಿದೆ ಎಂದು ವಾದಿಸಿದರು.

11. ಮೊದಲಿಗೆ, ನಾವು ಮಾನ್ಯ ಹೆಚ್ಚುವರಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇ ಟ್ ಅವರು ಸಂಜ್ಞೇಯತೆಯನ್ನು ತೆಗೆದುಕೊಂಡ ಆದೇಶದ ಕಾನೂನು ಔಚಿತ್ಯದ ಬಗ್ಗೆ ಗಮನಹರಿಸಬೇಕಾಗುತ್ತದೆ.ಎದುರುದಾರ-ಆಪಾದಿತನ ಪರ ಹಾಜರಾದ ಮಾನ್ಯ ವಕೀಲರು, ಸಂಘರ್ಷಾತ್ಮಕ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಸಂಹಿತೆಯ 190 ನೇ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟರ್ ಅಧಿಕಾರಕ್ಕೆ ಸಂಬಂಧಿಸಿದ ವಿವಾದವನ್ನು ಪೂರ್ಣ ಪೀಠಕ್ಕೆ ಒಪ್ಪಿಸಲಾಗಿದೆ, ಆದ್ದರಿಂದ ಸಂಜ್ಞೆಯತೆಯನ್ನು ತೆಗೆದುಕೊಳ್ಳುವ ಆದೇಶವು ಹಾನಿತಟ್ಟಲಾರದಂತಹದ್ದಾಗಿದೆಯೆಂದು ಅತೀವ ಭಾವೋತ್ಕಟತೆಯಿಂದ ವಾದಿಸಿದರು.ಸದರಿ ವಾದವನ್ನು ವಿವೇಚಿಸುವುದಕ್ಕೆ ಸದರಿ ವಿಷಯಕ್ಕೆ ಸಂಬಂಧಿಸಿದ ಕೆಲವು ತೀರ್ಪುಗಳನ್ನು ಪರಾಮರ್ಶಿಸುವುದು ಯುಕ್ತವೆಂದು ನನ್ನ ಅಭಿಪ್ರಾಯವಾಗಿದೆ.

12. ರಣಜಿತ್ ಸಿಂಗ್ -ವಿರುದ್ಧ ಪಂಜಾಬ್ ರಾಜ್ಯ, (1998) 7 ಎಸ್ಸಿಸಿ 149:1998 ಎಸ್ಸಿಸಿ (ಕ್ರಿ) 1554 ಮೊಕದ್ದಮೆಯಲ್ಲಿ, ತ್ರಿಸದಸ್ಯ ಪೀಠವು, ಯಾವುದೇ ಸಾಕ್ಷ್ಯವನ್ನು ಕಲೆಹಾಕುವ ಮುಂಚಿನ ಹಂತದಲ್ಲಿಯೇ, ಸೆಷನ್ಸ್ ನ್ಯಾಯಾಲಯವು ತನ್ನ ಮುಂದೆ ಇತ್ಯರ್ಥದಲ್ಲಿರುವ ಮೊಕದ್ದಮೆಯಲ್ಲಿ ಆಪಾದಿತರ ಪಟ್ಟಿಗೆ ಹೊಸ ವ್ಯಕ್ತಿಯನ್ನು ಸೇರ್ಪಡೆ ಮಾಡಬಹುದೇ ಎಂಬ ವಿವಾದಾಂಶದ ಬಗ್ಗೆ ವ್ಯವಹರಿಸಿದೆ.ಕಿಶನ್ಸಿಂಗ್ -ವಿರುದ್ಧ ಬಿಹಾರ ರಾಜ್ಯ (1996) 4 ಎಸ್ಸಿ 495:1996 ಎಸ್ಸಿ (ಕ್ರಿ) 772 ಮೊಕದ್ದಮೆಯಲ್ಲಿ ನಿರೂಪಿಸಿದ ಅನುಪಾತಕ್ಕೆ ಸಂಬಂಧಿಸಿದಂತೆ ರಾಜ್ಕಿಶೋರ್ ಪ್ರಸಾದ್ -ವಿರುದ್ಧ-ಬಿಹಾರ ರಾಜ್ಯ (1993) 2 ಎಸ್ 16:1993 ಎಸ್ಸಿ (ಕ್ರಿ) 470ಮೊಕದ್ದಮೆಯಲ್ಲಿ ದ್ವಿ-ಸದಸ್ಯ ಪೀಠವು ಮೀಸಲಾತಿಗಳನ್ನು ವ್ಯಕ್ತಪಡಿಸಿರುವ ರೀತಿಯಲ್ಲಿ ತ್ರಿಸದಸ್ಯ ಪೀಠವು ಈ ವಿವಾದಾಂಶದ ಬಗ್ಗೆ ವ್ಯವಹರಿಸಿದೆ.ರಣಜಿತ್ಸಿಂಗ್ ಮೊಕದ್ದಮೆಯಲ್ಲಿ ದಾಖಲಾದ ನಿರ್ಣಯವು ಈ ಕೆಳಕಂಡಂತಿದೆ:(ಎಸ್ಸಿಸಿ, ಪುಟ .156, ಪ್ಯಾರಾಗಳು 19-20):

"19. ಆದ್ದರಿಂದ ವಿಚಾರಣೆಗೆ ಒಪ್ಪಿಸಿದ ಹಂತದಿಂದ ಸಂಹಿತೆಯ 230 ನೇ ಪ್ರಕರಣದಲ್ಲಿ ಸೂಚಿಸಿದ ಹಂತವನ್ನು ತಲುಪುವವರೆಗೆ ಆ ನ್ಯಾಯಾಲಯವು, ಸಂಹಿತೆಯ 209 ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಆಪಾದಿತನ ಸಂಬಂಧದಲ್ಲಿ ಮಾತ್ರ ವ್ಯವಹರಿಸಬಹುದು.ಅಲ್ಲಿಯವರೆಗೆ ಸೆಷನ್ಸ್ ನ್ಯಾಯಾಲಯಕ್ಕೆ ಆಪಾದಿತರ ಪಟ್ಟಿಗೆ ಹೊಸ ವ್ಯಕ್ತಿಯನ್ನು ಸೇರ್ಪಡೆ ಮಾಡಲು ಯಾವುದೇ ಮಧ್ಯಂತರ ಹಂತವಿರುವುದಿಲ್ಲ.

20. ಅಂತೆಯೇ, ವಿಚಾರಣೆಗೆ ಒಪ್ಪಿಸುವಿಕೆಯ ಆದೇಶದ ಅನುಸಾರ ಒಮ್ಮೆ ಸೆಷನ್ಸ್ ನ್ಯಾಯಾಲಯವು ಅಪರಾಧದ ಸಂಜ್ಞೆಯತೆಯನ್ನು ತೆಗೆದುಕೊಂಡರೆ, ಆಪಾದಿತರ ಪಟ್ಟಿಗೆ ಯಾರೇ ಮತ್ತೊಬ್ಬ ವ್ಯಕ್ತಿಯನ್ನು ಸೇರ್ಪಡೆ ಮಾಡುವ ಅಧಿಕಾರವನ್ನು ಆ ನ್ಯಾಯಾಲಯವು ಪಡೆಯುವ ಮತ್ತೊಂದು ಹಂತವೆಂದರೆ, ಸಾಕ್ಷ್ಯವನ್ನು ಕಲೆ ಹಾಕಿದ ನಂತರ, ಸಂಹಿತೆಯ 319 ನೇ ಪ್ರಕರಣದ ಅಡಿಯಲ್ಲಿನ ಅಧಿಕಾರಗಳು ಅನ್ವಯವಾದಾಗ ಮಾತ್ರವೇ.ಅದು, ಆಪಾದಿತರ ಪಟ್ಟಿಗೆ ಸೇರ್ಪಡೆ ಮಾಡುವ ಅಧಿಕಾರ ಪಡೆಯುವ

ಮತ್ತೊಂದು ಹಂತವಾಗಿರುತ್ತದೆ.ಆಪಾದಿತರ ಪಟ್ಟಿಗೆ ಹೊಸ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಸೇರ್ಪಡೆ ಮಾಡುವುದಕ್ಕೆ ಅನುಮತಿಸುವ ಸೆಷನ್ಸ್ ನ್ಯಾಯಾಲಯದ ಇತರ ಯಾವುದೇ ಅಧಿಕಾರವು ನಮಗೆ ಕಂಡುಬಂದಿಲ್ಲ.ವಾಸ್ತವವಾಗಿ ಸದರಿ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ ಸಂಪೂರ್ಣ ಸಾಕ್ಷ್ಯವನ್ನು ಕಲೆ ಹಾಕುವವರೆಗೆ ನ್ಯಾಯಾಲಯವು ಕಾಯುವುದು ಅನಿವಾರ್ಯವಲ್ಲ ಎಂಬುದೂ ಸಹ ನಿಜವೇ ?.

13. ಕಿಶೋರಿಸಿಂಗ್ -ವಿರುದ್ಧ ಬಿಹಾರ ರಾಜ್ಯ, (2004) 13 ಎಸ್ಸಿಸಿ 11:(2006) 1 ಎಸ್ಸಿ (ಕ್ರಿ) 275 ಮೊಕದ್ದಮೆಯಲ್ಲಿ ಮಾನ್ಯ ನ್ಯಾಯಮೂರ್ತಿಗಳು ಈ ಮುಂದಿನಂತೆ ಅಭಿಪ್ರಾಯಪಟ್ಟಿದ್ದಾರೆ:(ಎಸ್ಸಿಸಿ ಪು .13 ಪ್ಯಾರಾ 10)

10. ಯಾರ ವಿರುದ್ಧ ಆರೋಪಪಟ್ಟಿಯನ್ನು ದಾಖಲಿಸಲಾಗಿರುವುದಿಲ್ಲವೋ ಆ ವ್ಯಕ್ತಿಗಳ ಮಟ್ಟಿಗೆ, ಕೆಲವು ಸಾಕ್ಷ್ಯ ಎ ಅಥವಾ ಮುಖ್ಯ ವಿಷಯಗಳನ್ನು ಅಧಿವಿಚಾರಣಾ ಸಮಯದಲ್ಲಿ ದಾಖಲೆಯಲ್ಲಿ ತಂದಾಗ ದಂಡ ಪ್ರಕ್ರಿಯಾ ಸಂಹಿತೆಯ 319 ನೇ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸಿ, ಅವರನ್ನು ' ಆಪಾದಿತ ವ್ಯಕ್ತಿಗಳು ' ಎಂಬ ಪಟ್ಟಿಗೆ ಸೇರಿಸಬಹುದು.ಅಥವಾ ಒಪ್ಪಿಸುವಿಕೆ ಆದೇಶವನ್ನು ಮಾಡುವಾಗ ಮ್ಯಾಜಿಸ್ಟ್ರೇಟರಾಗಲಿ ಅಥವಾ ಮಾನ್ಯ ಸೆಷನ್ಸ್ ನ್ಯಾಯಾಧಿಶರಾಗಲಿ ಉಚ್ಚ ನ್ಯಾಯಾಲಯಕ್ಕೆ ಚ ಒಪ್ಪಿಸಿದಾಗ ಮತ್ತು ಉಚ್ಚ ನ್ಯಾಯಾಲಯವು, ವಸ್ತು ವಿಷಯಗಳನ್ನು ಪರಿಶೀಲಿಸಿದ ಮೇಲೆ, ಇತ್ತೀಚಿನ ತ್ರಿ-ಸದಸ್ಯ ಪೀಠದಲ್ಲಿ ವಿವರಿಸಲಾದಂತೆ ಪೊಲೀಸರು ಆರೋಪ ಪಟ್ಟಿಯನ್ನು ಸಲ್ಲಿಸಬಹುದಾಗಿಲ್ಲದಿದ್ದರೂ ಕೂಡ, ಅವರ ವಿರುದ್ಧ ಸಾಕಷ್ಟು ಸಾಕ್ಷ್ಯಗಳಿವೆಯೆಂಬ ನಿರ್ಣಯಕ್ಕೆ ಬಂದರೆ ಎ ಆ ಒಂದು ಸಂದರ್ಭದಲ್ಲಿಯೂ ಸಹ ಅವರನ್ನು ' ಆಪಾದಿತರ ಪಟ್ಟಿಗೆ ಸೇರ್ಪಡೆಗೊಳಿಸಬಹುದಾಗಿದೆ.ಆ ಯಾವ ಆಕಸ್ಮಿಕತೆಗಳೂ ಪ್ರಸ್ತುತ ಮೊಕದ್ದಮೆಯಲ್ಲಿ ಉದ್ಭವಿಸಲಿಲ್ಲ ".

14. ಇಂಡಿಯಾ ಕ್ಯಾರಟ್ (ಪ್ರೈ) ಅಮಿಟೆಡ್ -ವಿರುದ್ಧ ಕರ್ನಾಟಕ ರಾಜ್ಯ, ಮೊಕದ್ದಮೆಯಲ್ಲಿ ತ್ರಿ-ಸದಸ್ಯ ಪೀಠವು ಸಂಹಿತೆಯ ಉಪಬಂಧಗಳನ್ನು ವಿಶ್ಲೇಷಿಸಿದ ನಂತರ, ಅಭಿನಂದನ್ ಝಾ ವಿರುದ್ಧ ದಿನೇಶ್ ಮಿಶ್ರಾ ಮತ್ತು ಹೆಚ್‌ಎಸ್ ಬೇನ್ಸ್ -ವಿರುದ್ಧ- (ಚಂಡೀಗಢ ಕೇಂದ್ರಾಡಳಿತ ಪ್ರದೇಶ) ರಾಜ್ಯ, ಮೊಕದ್ದಮೆಗಳಲ್ಲಿನ ತೀರ್ಪುಗಳನ್ನು ಉಲ್ಲೇಖಿಸಿ, ಈ ಮುಂದಿನಂತೆ ನಿರ್ಣಯವನ್ನು ನೀಡಿತು:(ಇಂಡಿಯಾ ಕ್ಯಾರಟ್ (ಪ್ರೈ) ಅಮಿಟೆಡ್ ಪ್ರಕರಣ, ಎಸ್ಸಿಸಿ, ಪು.139-40, ಪ್ಯಾರಾ 16)

"16. ಆದ್ದರಿಂದ, ಈಗಿನ ವಸ್ತುಸ್ಥಿತಿ ಏನೆಂದರೆ, ಮ್ಯಾಜಿಸ್ಟ್ರೇಟರು, 173 ( 2) ನೇ ಪ್ರಕರಣದ ಮೇರೆಗೆ ಪೊಲೀಸ್ ವರದಿಯನ್ನು ಪಡೆದ ಮೇಲೆ, ಪೊಲೀಸ್ ವರದಿಯಲ್ಲಿ ಆಪಾದಿತನ ವಿರುದ್ಧ ಯಾವುದೇ ಸಾಕ್ಷ್ಯಾಧಾರವಿಲ್ಲವೆಂಬ ವರದಿಗಳಿದ್ದರೂ ಕೂಡ ಸಂಹಿತೆಯ 190 ( 1) (ಬಿ) ಪ್ರಕರಣದ ಮೇರೆಗೆ ಅಪರಾಧದ ಸಂಜ್ಞೆಯತೆಯನ್ನು ತೆಗೆದುಕೊಳ್ಳಲು ಅರ್ಹನಾಗಿರುತ್ತಾರೆಂಬುದು ಈಗಾಗಲೇ ಸುಸ್ಥಾಪಿತವಾಗಿದೆ.ಮ್ಯಾಜಿಸ್ಟ್ರೇಟರು, ತನಿಖಾ ಅವಧಿಯಲ್ಲಿ ಪೊಲೀಸರು ವಿಚಾರಣೆ ಮಾಡಿದ ಸಾಕ್ಷಿದಾರರ ಹೇಳಿಕೆಗಳನ್ನು ಗಣನೆಗೆ ತೆಗೆದುಕೊಳ್ಳಬಹುದು ಹಾಗೂ ಆಪಾದಿತನಿಗೆ ಆದೇಶಿಕೆ ಹೊರಡಿಸುವ ಬಗ್ಗೆ ಆದೇಶ ಮಾಡಬಹುದು.ತನಿಖಾಧಿಕಾರಿಯು ತನಿಖೆಯಲ್ಲಿ ಆಪಾದಿತನ ವಿರುದ್ಧ ವಾದವನ್ನು ರೂಪಿಸಲಾಗಿದೆ ಎಂದು ಅಭಿಪ್ರಾಯಪಟ್ಟರೆ ಮಾತ್ರವೇ ಮ್ಯಾಜಿಸ್ಟ್ರೇಟರು ಅಪರಾಧದ ಸಂಜ್ಞೆಯತೆಯನ್ನು ತೆಗೆದುಕೊಳ್ಳಲು ಸಾಧ್ಯವೆಂದು 190 ( 1) (ಬಿ) ಪ್ರಕರಣವು ನಿರೂಪಿಸಿಲ್ಲ.ಮ್ಯಾಜಿಸ್ಟ್ರೇಟರು, ತನಿಖಾಧಿಕಾರಿಯು ಸಾಧಿಸಿದ ನಿರ್ಣಯವನ್ನು ಅಲಕ್ಷಿಸಿ, ತನಿಖೆಯಿಂದ ಹೊರಬಂದ ವಾಸ್ತವ ಸಂಗತಿಗಳ ಬಗ್ಗೆ ತಾವೇ ಸ್ವತ:ಗಮನವನ್ನು ಹರಿಸಬಹುದು ಮತ್ತು ತಮಗೆ ಸೂಕ್ತವೆಂದು ಭಾವಿಸಿದರೆ, 190 ( 1) (ಬಿ) ಪ್ರಕರಣದ ಮೇರೆಗೆ ತಮ್ಮ

ಅಧಿಕಾರಗಳನ್ನು ಚಲಾಯಿಸಿ, ಸಂಜೇಯತೆಯನ್ನು ತೆಗೆದುಕೊಂಡು, ಆಪಾದಿತನಿಗೆ ಆದೇಶಿಕೆಯನ್ನು ಹೊರಡಿಸುವಂತೆ ನಿರ್ದೇಶಿಸಬಹುದು.

15. ಧರಮ್ಪಾಲ್ -ವಿರುದ್ಧ ಹರಿಯಾಣ ರಾಜ್ಯ (2004) 13 ಎಸ್ಸಿಸಿ 9:(2006) 1 ಎಸ್ಸಿ (ಕ್ರಿ) 273, ಮೊಕದ್ದಮೆಯಲ್ಲಿ 9 ತ್ರಿ-ಸದಸ್ಯ ಪೀಠವು, ಕಿಶೋರ್ ಸಿಂಗ್, ರಾಜೇಂದರ್ ಪ್ರಸಾದ್ -ವಿರುದ್ಧ-ಬಷೀರ್ (2001) 8 ಎಸ್ಸಿಸಿ 522:2002 ಎಸ್ಸಿ (ಕ್ರಿ) 28 ಮತ್ತು ಎಫ್ಡಬ್ಲ್ಯೂಐಎಲ್ ಅಮಿಟೆಡ್ -ವಿರುದ್ಧ ದೆಹಲಿ ರಾಜ್ಯ, (2001) 6 ಎಸ್ಸಿಸಿ 670:2001 ಎಸ್ಸಿ (ಕ್ರಿ) 1205 ಮೊಕದ್ದಮೆಗಳಲ್ಲಿ ಅಭಿಪ್ರಾಯಗಳ ಸಂಘರ್ಷವನ್ನು ಪರಿಹರಿಸುವ ವಿಷಯದ ಬಗ್ಗೆ ವ್ಯವಹರಿಸಿದೆ. ಆ ಸಂದಿಗ್ಧ ಸನ್ನಿವೇಶದಲ್ಲಿ ಕಿಶನ್ಸಿಂಗ್ ಮತ್ತು ರಣಜಿತ್ ಸಿಂಗ್ ಮೊಕದ್ದಮೆಗಳಲ್ಲಿನ ತೀರ್ಪುಗಳನ್ನು ನ್ಯಾಯಾಲಯದ ಗಮನಕ್ಕೆ ತರಲಾಗಿತ್ತು.ತ್ರಿಸದಸ್ಯ ಪೀಠವು ಸಂಹಿತೆಯ ಹಲವಾರು ಉಪಬಂಧಗಳನ್ನು ಪರಾಮರ್ಶಿಸಿದ ನಂತರ ಈ ಕೆಳಕಂಡಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿತು:(ಧರಮ್ಪಾಲ್ ಮೊಕದ್ದಮೆ, ಎಸ್ಸಿ, ಪು .11, ಪ್ಯಾರಾ 3)

"3. ಮೇಲುನೋಟಕ್ಕೇ, ರಣಜಿತ್ಸಿಂಗ್ ಮೊಕದ್ದಮೆಯಲ್ಲಿ ಮಾಡಿದ ವ್ಯಾಖ್ಯಾನವು ಸರಿಯಾಗಿದೆಯೆಂದು ನಮಗನಿಸುವುದಿಲ್ಲ.ನಮ್ಮ ಅಭಿಪ್ರಾಯದಲ್ಲಿ, ಕಿಶನ್ಸಿಂಗ್ ಮೊಕದ್ದಮೆಯಲ್ಲಿ ಕಾನೂನನ್ನು ಸರಿಯಾಗಿ ನಿರೂಪಿಸಲಾಗಿದೆ.ರಣಜಿತ್ ಸಿಂಗ್ ಮೊಕದ್ದಮೆಯಲ್ಲಿನ ನಿರ್ಣಯವು ತಿ-ಸದಸ್ಯ ಪೀಠದ ನಿರ್ಣಯವಾಗಿರುವುದರಿಂದ, ಅದನ್ನು ಪೂರ್ಣ ಪೀಠದ ಮುಂದೆ ಮಂಡಿಸುವುದಕ್ಕಾಗಿ ಮಾನ್ಯ ಮುಖ್ಯ ನ್ಯಾಯಮೂರ್ತಿಗಳ ಮುಂದೆ ವಿಷಯವನ್ನು ಮಂಡಿಸಬಹುದೆಂದು ನಾವು ನಿರ್ದೇಶಿಸುತ್ತೇವೆ ".

ಆ ವಿಷಯವು ಇನ್ನೂ ಇತ್ಯರ್ಥದಲ್ಲಿದೆಯೆಂಬುದು ನಿರ್ವಿವಾದವಾಗಿದೆ.

16. ಉಮಾಶಂಕರ್ ಸಿಂಗ್ -ವಿರುದ್ಧ-ಬಿಹಾರ ರಾಜ್ಯ(2010) 9 ಎಸ್ಸಿಸಿ 479: (2010) 3 ಎಸ್ಸಿಸಿ 1397, ಮೊಕದ್ದಮೆಯಲ್ಲಿ ದ್ವಿಸದಸ್ಯ ಪೀಠವು ಸಂಹಿತೆಯ 190 ( 1) (ಬಿ) ಪ್ರಕರಣದ ಅಡಿಯಲ್ಲಿನ ಮ್ಯಾಜಿಸ್ಟ್ರೇಟರ ಅಧಿಕಾರಕ್ಕೆ ಸಂಬಂಧಿಸಿದ ವಿಷಯದ ಬಗ್ಗೆ ವ್ಯವಹರಿಸಿದೆ.ತೀರ್ಪುಗಳನ್ನು ಧರಮ್ ಪಾಲ್ ಮೊಕದ್ದಮೆಯಲ್ಲಿನ ಉಲ್ಲೇಖಿತ ಆದೇಶವನ್ನು ಗಣನೆಗೆ ತೆಗೆದುಕೊಂಡ ನಂತರ, ನ್ಯಾಯಾಲಯವು, ಸಂಹಿತೆಯ 173 ( 2) ನೇ ಪ್ರಕರಣದ ಮೇರೆಗೆ ತನಿಖಾ ಏಜೆನ್ಸಿಗಳು ಸಲ್ಲಿಸಿದ ಅಂತಿಮ ವರದಿಯನ್ನು ಮ್ಯಾಜಿಸ್ಟ್ರೇಟರು ಒಪ್ಪಿಕೊಳ್ಳಲು ಬದ್ಧರಾಗಿರುವುದಿಲ್ಲವೆಂಬ ಮತ್ತು ಪೊಲೀಸ್ ವರದಿಯಲ್ಲಿಯೇ ಸದರಿ ಪ್ರಾಧಿಕಾರಿಗಳು ಆಪಾದಿತರನ್ನು ದೋಷಮುಕ್ತರನ್ನಾಗಿಸಿದ್ದರೂ ಕೂಡ, ಪೊಲೀಸ್ ವರದಿಯ ಆಧಾರದ ಮೇಲೆ ಯಾವುದೇ ಪ್ರತ್ಯೇಕ ವಿಚಾರಣೆ ನಡೆಸದೆ ಆಪಾದಿತನ ವಿರುದ್ಧ ಆದೇಶಿಕೆಯನ್ನು ಹೊರಡಿಸಲು ಮ್ಯಾಜಿಸ್ಟ್ರೇಟರು ಅರ್ಹರಾಗಿರುತ್ತಾರೆಂಬ ವಾದವನ್ನು ಒಪ್ಪಿಕೊಂಡಿದೆ ಮಾನ್ಯ ನ್ಯಾಯಮೂರ್ತಿಗಳ ಅಭಿಪ್ರಾಯಗಳು ಈ ಮುಂದಿನಂತಿವೆ:(ಉಮಾಶಂಕರ್ ಸಿಂಗ್ ಮೊಕದ್ದಮೆ, ಎಸ್ಸಿಸಿ, ಪು .483 ಪ್ಯಾರಾ -19)

" 19 ...... ಆಪಾದಿತನ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳಿಲ್ಲವೆಂಬುದು ತನಿಖಾ ಪ್ರಾಧಿಕಾರಿಯ ಅಭಿಪ್ರಾಯವಾಗಿದ್ದರೂ ಕೂಡ ಪೊಲೀಸ್ ವರದಿಯಲ್ಲಿರುವ ವಿಷಯಗಳ ಬಗ್ಗೆ ಮ್ಯಾಜಿಸ್ಟ್ರೇಟರು ವೈಯಕ್ತಿಕವಾಗಿ ತಮ್ಮ ಗಮನಹರಿಸಿ, ದಂಡ ಪ್ರಕ್ರಿಯಾ ಸಂಹಿತೆಯ 190 ( 1) (ಬಿ) ಪ್ರಕರಣದ ಅಡಿಯಲ್ಲಿನ ತನ್ನ ಅಧಿಕಾರಗಳನ್ನು ಚಲಾಯಿಸಿ, ಅದರ ಮೇಲೆ ಸಂಜ್ಞೆಯತೆಯನ್ನು ತೆಗೆದುಕೊಳ್ಳಬಹುದಾಗಿದೆ.

17. ಸದರಿ ಮೊಕದ್ದಮೆಯಲ್ಲಿ, ಪೂರ್ಣ ಪೀಠದ ಮುಂದೆ ಇತ್ಯರ್ಥದಲ್ಲಿರುವ ಮಂಡಿತ ವಿಷಯದ ಬಗ್ಗೆ ವ್ಯವಹರಿಸುವಾಗ ಮತ್ತು ಇದಕ್ಕೆ ಸಂಬಂಧಿಸಿದಂತೆ ಇತ್ಯರ್ಥದಲ್ಲಿರುವ ಮಂಡಿತ ವಿಷಯದ ಬಗ್ಗೆ ಲಕ್ಷ್ಯವಹಿಸಿ, ನ್ಯಾಯಾಲಯವು ಈ ಕೆಳಕಂಡಂತೆ ಅಭಿಪ್ರಾಯಪಟ್ಟಿದೆ:(ಉಮಾಶಂಕರ್ ಸಿಂಗ್ ಮೊಕದ್ದಮೆ, ಎಸ್ಸಿಸಿ, ಪು .483, ಪ್ಯಾರಾ -18)

66 " 18 ...... ಧರಮ್ಪಾಲ್ ಮೊಕದ್ದಮೆಯಲ್ಲಿ ಪೂರ್ಣ ಪೀಠಕ್ಕೆ ವರ್ಗಾಯಿಸಿದ ವಿಷಯದ ಫಲಿತಾಂಶವನ್ನು ಕಾಯುವ ಅಗತ್ಯವೇನಿಲ್ಲ.ಆ ವರ್ಗಾಯಿತ ವಿಷಯವು, ತನಿಖಾ ಪ್ರಾಧಿಕಾರಿಗಳು ಸಲ್ಲಿಸಿದ ಅಂತಿಮ ವರದಿಯನ್ನು ಮ್ಯಾಜಿಸ್ಟ್ರೇಟರು ಒಪ್ಪದಿದ್ದರೆ, ಆಗ ಅವರ ವಿಚಾರಣಾ ಅಧಿಕಾರಕ್ಕೆ ಸಂಬಂಧಿಸಿದ ವಿಷಯವಾಗುತ್ತದೆ.ಈ ಮೊಕದ್ದಮೆಯ ವಾಸ್ತವ ಸಂಗತಿಗಳು ವಿಭಿನ್ನವಾಗಿದ್ದು, ಅವು ಅಭಿನಂದನ್ ಝಾ ವಿರುದ್ಧ-ದಿನೇಶ್ ಮಿಶ್ರಾ ಇನ್ನೂ ಮುಂತಾದ ಮೊಕದ್ದಮೆಗಳ ಸಾಲನ್ನೇ ಅನುಸರಿಸಿದ ಇಂಡಿಯಾ ಕಾರಟ್ (ಪ್ರೈ) ಲಿಮಿಟೆಡ್ ಮೊಕದ್ದಮೆಯಲ್ಲಿನ ಈ ನ್ಯಾಯಾಲಯದ ನಿರ್ಣಯದ ವ್ಯಾಪ್ತಿಗೆ ಬರುತ್ತವೆ.

18. ಮೇಲೆ ತಿಳಿಸಿದ ಕಾನೂನು ನಿರೂಪಣೆಯ ಹಿನ್ನೆಲೆಯಲ್ಲಿ, ಸಂಜ್ಞೇಯತೆಯನ್ನು ತೆಗೆದುಕೊಂಡ ಆದೇಶದಲ್ಲಿ ಯಾವ ದೋಷವೂ ಕಂಡುಬರುತ್ತಿಲ್ಲ ಎಂಬುದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ.ಮಾನ್ಯ ಹೆಚ್ಚುವರಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್ ಅವರು ಮಾಹಿತಿದಾರನು ತಮ್ಮ ಗಮನಕ್ಕೆ ತಂದ ಸಂಗತಿಗಳ ಆಧಾರದ ಮೇಲೆ ಸಂಜ್ಞೇಯತೆಯನ್ನು ತೆಗೆದುಕೊಂಡು ಅವರು ವಾಸ್ತವವಾಗಿ ಸಂಹಿತೆಯ 190 ( 1) (ಬಿ) ಪ್ರಕರಣದ ಅಡಿಯಲ್ಲಿನ ಅಧಿಕಾರವನ್ನು ಚಲಾಯಿಸಿದ್ದಾರೆಂಬುದನ್ನು ಸ್ಪಷ್ಟಪಡಿಸುವಂತೆ ನಾವು ಅಗತ್ಯಪಡಿಸಬಹುದು.

19. ವಾದದ ಎರಡನೆಯ ಅಂಶವೇನೆಂದರೆ, ವಾಸ್ತವ ಸಂಗತಿಗಳ ಸರಣಿಯನ್ನು ಪಡೆದುಕೊಳ್ಳುವಲ್ಲಿ, ಉಚ್ಚ ನ್ಯಾಯಾಲಯವು ಎದುರುದಾರ ಆಪಾದಿತನನ್ನು ಚ ಮುಕ್ತಗೊಳಿಸಿ ಹೊರಡಿಸಿದ ಆದೇಶವು ಕಾನೂನಿನಲ್ಲಿ ಸಮರ್ಥನೀಯವಾಗಿದೆಯೇ ಎಂಬುದು.ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ತನ್ನ ವಿರುದ್ಧ ಆರೋಪಗಳನ್ನು ರೂಪಿಸಿದ್ದಾರೆ ಎಂಬುದು ತನಗೆ ಸಂಪೂರ್ಣವಾಗಿ ಗೊತ್ತಿದ್ದರೂ, ಸಂಜ್ಞೇಯತೆಯನ್ನು ತೆಗೆದುಕೊಂಡ ಆದೇಶದ ವಿರುದ್ಧದ ಪುನರ್ಪರಿಶೀಲನಾ ಅರ್ಜಿಯ ವಿಚಾರಣೆ ನಡೆಸಿದ ಪುನರ್ಪರಿಶೀಲನಾ ನ್ಯಾಯಾಲಯದ ಗಮನಕ್ಕೆ ಅದನ್ನು ತಂದೇ ಇರಲಿಲ್ಲ ಎಂಬುದನ್ನು ನಾವು ಸ್ಪಷ್ಟವಾಗಿ ತಿಳಿಸಿದ್ದೇವೆ.ಇದು ಸ್ಪಷ್ಟವಾಗಿ ವಂಚನಾ ಪ್ರಕರಣವಾಗಿದೆ.ಇದು ವಿಶೇಷವಾಗಿ ಆಪಾದಿತನಿಗೇ ಗೊತ್ತಿದ್ದ ವಿಷಯವಾಗಿತ್ತು.ನ್ಯಾಯಾಲಯದಲ್ಲಿ ವಂಚನೆಯ ಹೊಸ ವಿಧಾನವನ್ನು ಕಂಡುಕೊಳ್ಳುವ ಯಾರೇ ವ್ಯಕ್ತಿಯು ವಾಸ್ತವವಾಗಿ ನ್ಯಾಯಾಲಯದಲ್ಲಿ ಮೋಸದ ಆಟವನ್ನಾಡುತ್ತಿರುತ್ತಾನೆ ಮತ್ತು ಆ ಸಂಬಂಧ ' ಸತ್ಯವನ್ನು ಮರೆಮಾಚುವುದು ಹಾಗೂ ಸುಳ್ಳನ್ನು ಸೂಚಿಸುವುದು ' ಎಂಬ ತತ್ವವು ಎಂದರೆ, ಸತ್ಯವನ್ನು ಮರೆಮಾಚುವುದು ಸುಳ್ಳು ಹೇಳುವುದಕ್ಕೆ ಸಮಾನವಾದುದಾಗಿರುತ್ತದೆ ಎಂಬ ತತ್ವವು ಅನ್ವಯವಾಗುತ್ತದೆ.ಪುನರ್ಪರಿಶೀಲನಾ ನ್ಯಾಯಾಲಯದ ಮುಂದೆ ಸತ್ಯ ಸಂಗತಿಯನ್ನು ಉದ್ದೇಶಪೂರ್ವಕವಾಗಿಯೇ ಮರೆಮಾಚಲಾಗಿದೆ ಎಂಬುದನ್ನು ನಾವು ಹೇಳುವುದು ಅನಿವಾರ್ಯವಾಗಿದೆ.ಎದುರುದಾರ ಆಪಾದಿತನು ಹಾಗೆ ಸತ್ಯ ಸಂಗತಿಯನ್ನು ಮುಚ್ಚಿಡುವುದರ ಮೂಲಕ ಪ್ರಯೋಜನದ ಲಾಭ ಪಡೆಯಲು ಪ್ರಯತ್ನಿಸಿದ್ದಾನೆಂಬುದನ್ನು ನಿಶ್ಚಯವಾಗಿ ಹೇಳಬಹುದಾಗಿದೆ.ಮೋಸದ ಉದ್ದೇಶ ಸುಸ್ಪಷ್ಟವಾಗಿ ಕಂಡು ಬರುತ್ತಿದೆ.ವಾಸ್ತವವಾಗಿ ತಾನು ಮುಗ್ಧನೆಂದು ತೋರಿಸುವ ಸಾಹಸವನ್ನು ಮಾಡಿ, ಮುಗ್ಧತೆಯ ನಾಟಕವಾಡಿದ್ದಾನೆ.

20. ನಮಗೆ ಕಂಡುಬಂದಂತೆ, ಉಚ್ಚ ನ್ಯಾಯಾಲಯವು, ತಳಹದಿಯೇ ಕುಸಿದಾಗ ಮೇಲು ರಚನೆಯು ಕುಸಿಯಲು ಬದ್ಧವಾಗಿರುತ್ತದೆ ' ಎಂಬ ಮೂಲತತ್ವವನ್ನು ಅನ್ವಯಿಸಿದೆ.ಆದರೆ, ಪ್ರಯೋಜನದ ಲಾಭ ಪಡೆದುಕೊಳ್ಳಲು ನ್ಯಾಯಾಲಯಕ್ಕೆ ಮೋಸವನ್ನು ಮಾಡುವ ಮೂಲಕ ಮತ್ತು ಸತ್ಯ ಸಂಗತಿಯನ್ನು ಮರೆಮಾಚುವ ಮೂಲಕ ಆದೇಶವನ್ನು ಪಡೆದುಕೊಂಡಿರುವುದರಿಂದ ಸದರಿ ಆದೇಶವು ಊರ್ಜಿತವಾಗುವುದಕ್ಕೆ ಅವಕಾಶ ನೀಡಲಾಗದು.ಅದರ ಜೊತೆಗೆ, ಆದೇಶದ ಕಾನೂನು ಸಮರ್ಥನೆಗೆ ಸಂಬಂಧಿಸಿದಂತೆ ನಾವು ಸುದೀರ್ಘವಾಗಿ ವ್ಯವಹರಿಸಿದ್ದೇವೆ.ಈ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ, ಪಕ್ಷಕಾರರ ನಡುವೆ ಸಂಪೂರ್ಣ ನ್ಯಾಯವನ್ನು ಒದಗಿಸುವುದಕ್ಕೆ ಸಂವಿಧಾನದ 142 ನೇ ಅನುಚ್ಛೇದದ ಅಡಿಯಲ್ಲಿನ ಅಧಿಕಾರವನ್ನು ಬಳಸುವುದು ಅಗತ್ಯವೆಂದು ನಾವು ಆಲೋಚಿಸುವಂತಾಗಿದೆ.ಅಪರಾಧಗಳ ಸಂಜ್ಞೆಯತೆಯನ್ನು ಮಾನ್ಯ ಮ್ಯಾಜಿಸ್ಟ್ರೇಟ್ ಸರಿಯಾಗಿಯೇ ತೆಗೆದುಕೊಂಡಿದ್ದಾರೆ ಮತ್ತು ನಮಗೆ ಕಂಡುಬಂದಂತೆ, ಆರೋಪಗಳನ್ನು ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ಸರಿಯಾಗಿಯೇ ರೂಪಿಸಿದ್ದಾರೆ.ಆಪಾದಿತನ ವಿರುದ್ಧದ ಆಪಾದನೆಗಳು ರುಜುವಾತಾಗುವವರೆಗೆ ಆಪಾದಿತನು ಎಷ್ಟರ ಮಟ್ಟಿಗೆ ಮುಗ್ಧತೆಯ ಲಾಭವನ್ನು ಅನುಭವಿಸಿದನೋ ಅಷ್ಟೇ ಮಟ್ಟಿಗೆ ಅಪರಾಧದಲ್ಲಿ ನೊಂದ ವ್ಯಕ್ತಿಗೂ ಸಹ ನ್ಯಾಯಾಲಯದಿಂದ ನ್ಯಾಯ ಪಡೆಯುವ ಹಕ್ಕು ಇರುತ್ತದೆ.ಸದ್ಯದ ಮೊಕದ್ದಮೆಯಲ್ಲಿ, ವಂಚನೆಯ ಮೂಲಕ ಸಮನುಗಳನ್ನು ರದ್ದುಪಡಿಸುವ ಆದೇಶವನ್ನು ಪಡೆದುಕೊಂಡಿರುವಾಗ, ಸದರಿ ಆದೇಶವನ್ನು ರದ್ದುಪಡಿಸಿ, ಆರೋಪಗಳನ್ನು ರೂಪಿಸಿದ ಆದೇಶವನ್ನು ಮರುಸ್ಥಾಪಿಸುವ ಮತ್ತು ಅಧಿ ವಿಚಾರಣೆ ಮುಂದುವರಿಯುವಂತೆ ನಿರ್ದೇಶಿಸುವ ಬಾಧ್ಯತೆಯನ್ನು ಈ ನ್ಯಾಯಾಲಯವು ಹೊಂದಿದ್ದು, ಅದರಂತೆ ನಾವು ನಿರ್ದೇಶಿಸುತ್ತೇವೆ.

21. ತತ್ಪರಿಣಾಮವಾಗಿ, ಮೇಲ್ಮನವಿಯನ್ನು ಪುರಸ್ಕರಿಸಲಾಗಿದೆ.ಪ್ರೇಮ್ಪ್ರಕಾಶ್ –ವಿರುದ್ಧ-ರಾಜಸ್ತಾನ ರಾಜ್ಯ ಮೊಕದ್ದಮೆಯಲ್ಲಿ ಉಚ್ಚ ನ್ಯಾಯಾಲಯವು ಹೊರಡಿಸಿದ ಆದೇಶವನ್ನು ಮತ್ತು ಕ್ರಿಮಿನಲ್ ಪುನರ್ಪರಿಶೀಲನಾ ಅರ್ಜಿ ಸಂ .2009 ರ 7 ರಲ್ಲಿ ಜೋಧಪುರದ ಮಾನ್ಯ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಸಂ .1 ಅವರು ಹೊರಡಿಸಿದ ಆದೇಶವನ್ನು ರದ್ದುಪಡಿಸಲಾಗಿದೆ ಮತ್ತು ಜೋಧಪುರದ ಮಾನ್ಯ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಸಂ .3 ಅವರ ಮುಂದೆ ಇತ್ಯರ್ಥದಲ್ಲಿರುವ ಅಧಿವಿಚಾರಣೆಯನ್ನು ಕಾನೂನಿಗನುಗುಣವಾಗಿ ಮುಂದುವರಿಸ ತಕ್ಕದ್ದೆಂದು ನಿರ್ದೇಶಿಸಲಾಗಿದೆ.